ಮಾಲೀಕರ ಬಳಿ ಕುದುರೆಗಳಿವೆ. ಈ ಕುದುರೆಗಳು ಮತ್ತು ನಾವು, ಪ್ರವಾಸಿಗರನ್ನೇ ನಂಬಿಕೊಂಡಿದ್ದೇವೆ' ಎಂದು ಮಾತಿಗೆ ಮೊದಲಾಗುತ್ತಿದ್ದಂತೆ ಕಣಿವೆಯ ಏರುಗತಿ ಬಂತು. 'ಬೆನ್ನು ಬಾಗಿಸಿ. ಸ್ವಲ್ಪ ಕತ್ತು ಕೆಳಗೆ ಮಾಡಿ' ಎಂದು ಸಂಜ್ಞೆ ಮಾಡಿದ. ಕುದುರೆಗೆ ಭಾರ ಹೊರಲು ಬ್ಯಾಲೆನ್ಸ್ ಆಗುವಂತೆ ಹೀಗೆ ಮಾಡಬೇಕಾಗುತ್ತದಂತೆ.

ಕೆಸರುಮಯವಾದ ಕಲ್ಲುಗೊಜ್ಜುಗಳ ದಾರಿಯದು. ಸಾಲಾಗಿ ಐದು ಕುದುರೆಗಳನ್ನು ಒಂದಕ್ಕೊಂದು ಕಟ್ಟಿದ್ದ. ಒಂದೊಂದು ಕುದುರೆಯ ಮೇಲೂ ಒಬ್ಬೊಬ್ಬರು ಪ್ರವಾಸಿಗರು. ದೀಪಕ್ ಮುಂದಿರುವ ಒಂದು ಕುದುರೆಯನ್ನು ಮಾತ್ರ ಹಿಡಿದುಕೊಂಡಿದ್ದ. ಉಳಿದವರು ಅವನ ಸೂಚನೆಯ ಮೇರೆಗೇ ದಾರಿ ಸವೆಸುತ್ತಿದ್ದವು.

'ಇಷ್ಟು ಚಿಕ್ಕ ವಯಸ್ಸಿಗೇ ಈ ಕೆಲಸ ಮಾಡ್ತಿದ್ದೀರಲ್ಲಾ?' ಎಂದು ಕುತೂಹಲದಿಂದ ಕೇಳಿದರೆ, 'ಅಯ್ಯೋ 8ರಿಂದ 10 ವರ್ಷದ ಮಕ್ಕಳೆಲ್ಲ ಕುದುರೆ ಸವಾರಿ ಮಾಡ್ತಾರೆ. ನಾನು ಕುದುರೆ ಜೀನು ಹಿಡಿದು ಐದು ವರ್ಷ ಆಗ್ತಾ ಬಂತು' ಎಂದು ಕಣ್ಣುಮಿಟುಕಿಸಿದ.

ಬೆಟ್ಟ ಏರುತ್ತಿದ್ದಂತೆ ಹಿಮಗಾಳಿಯು ಮೆಲ್ಲ ಬೀಸತೊಡಗಿತು. 'ಅಲ್ಲ, ಈ ಕುದುರೆಗಳಿಗೆ ಚಳಿ ಆಗಲ್ವಾ? ಎಂಬ ನನ್ನ ಕುತೂಹಲವನ್ನು ಅವನ ಮುಂದಿಟ್ಟೆ. 'ಇಲ್ಲ. ಚಳಿಯೇನೂ ಆಗಲ್ಲ. ಆದ್ರೆ ಕೆಲವೊಮ್ಮೆ ಪ್ರವಾಸಿಗರನ್ನು ಹೊತ್ತು ಹೊತ್ತು ಸುಸ್ತಾಗಿ ಬಿಡುತ್ತವೆ. ಇಲ್ಲಿಂದ ಬೆಟ್ಟದ ಆ ತುದಿಗೂ, ಅಲ್ಲಿಂದ ಕಣಿವೆಯ ಈ ತುದಿಗೂ ಒಟ್ಟು ಆರು ಕಿ.ಮೀ. ಆಗ್ತದೆ. ದಿನವೊಂದಕ್ಕೆ ಹತ್ತಕ್ಕಿಂತ ಹೆಚ್ಚು ಬಾರಿ ಸವಾರಿ ಮಾಡುತ್ತೆ. ಕೆಲವೊಮ್ಮೆ ಮಧ್ಯಾಹ್ನವೇ ಅವಕ್ಕೆ ನಿದ್ದೆಯ ಮಂಪರು ಹತ್ತಿ ಬಿಡುತ್ತೆ' ಎನ್ನುತ್ತ, 'ಅಯ್ಯೋ, ಇರಿ ಸುಲ್ತಾನನಿಗೆ ತುಂಬಾ ಬಾಯಾರಿಕೆ ಆಗಿದೆ' ಎಂದು ಕಿರುತೊರೆಯೆಡೆಗೆ ಕೊಂಡೊಯ್ದ. ಬೆಟ್ಟದ ಮಡಿಲಿನಿಂದ ಒಸರುವ ನೀರಿಗೆ ಚಿಕ್ಕ ಪೈಪ್ ಹಾಕಿ ದಾರಿ ಬದಿಗೆ ಕುದುರೆಗಳಿಗೆ ನೀರು ಕುಡಿಯಲು ಅನುಕೂಲ ಆಗುವ ಹಾಗೆ ವ್ಯವಸ್ಥೆ ಮಾಡಲಾಗಿತ್ತು. ಒಂದೊಂದು ಕುದುರೆಯೂ ಸರತಿಯಲ್ಲಿ ನಿಂತು ಶಿಸ್ತಾಗಿ ನೀರು ಕುಡಿದು ಮುಂದೆ ಸಾಗುತ್ತಿದ್ದವು. ದೀಪಕನ ಜೊತೆಗಿನ ಹರಟೆಯೂ ಹಾಗೆಯೇ ಮುಂದುವರಿಯಿತು.

'ಈ ಕಣಿವೆ, ಆ ಊರು, ಈ ಕುದುರೆಗಳೇ ನಮ್ಮ ಪ್ರಪಂಚ. ಬೆಳಿಗ್ಗೆ ಎಂಟಕ್ಕೆಲ್ಲ ಮನೆ ಬಿಡ್ತೀವಿ. ರಾತ್ರಿ 8ಕ್ಕೆ ಮನೆ ಸೇರ್ತೀವಿ. ಕನಿಷ್ಠ ಅಂದ್ರೂ ದಿನಕ್ಕೆ ಐದು ಸಾವಿರ ದುಡೀತೀವಿ. ಆದರೆ ಕುದುರೆಗಳಿಗೇ ಸುಮಾರು ಖರ್ಚಾಗಿಬಿಡುತ್ತದೆ. ದುಡಿದಿದ್ದೆಲ್ಲ ಮನೆಗೆ ಕೊಡೋದಿಲ್ಲ. ಒಂದಿಷ್ಟು ನಾನಿಟ್ಟುಕೊಂಡು ಉಳಿದದ್ದನ್ನು ಮನೆಗೆ ಕೊಡ್ತೀನಿ' ಎಂದು ತನ್ನ ಜೀವನ ನಿರ್ವಹಣೆಯ ಆರ್ಥಿಕ ಲೆಕ್ಕಾಚಾರಗಳನ್ನು ಮುಂದಿಡುತ್ತಲೇ, 'ನನ್ನ ಕುದುರೆಗಳಿಗೆ ಹಿಂದಿ ಹಾಡೆಂದರೆ ಬಾಳ ಇಷ್ಟ. ಸವಾರಿ ಹೊರಟಾಗ ಮೊಬೈಲಿನಲ್ಲಿ ಹಾಡು ಕೇಳಿಸ್ತೀನಿ' ಎನ್ನುತ್ತಾ ಮೊಬೈಲ್ ಹಾಡು ಹಚ್ಚಿದ.

ಊರು ಸಮೀಪಿಸುತ್ತಿದ್ದಂತೆ ಪ್ರವಾಸಿಗರನ್ನು ಹೊತ್ತ ಕುದುರೆಗಳು ಹೊರೆ ಇಳಿಸಿಕೊಳ್ಳಲು ಮುಂದಾದವು. 'ಅಲ್ನೋಡಿ' ಎಂದು ದೂರದಲ್ಲಿ ಸಾಲು ಸಾಲು ಕುದುರೆಗಳ ನಡುವೆ ಮರವೊಂದಕ್ಕೆ ಕಟ್ಟಿದ್ದ ಬಿಳಿ ಕುದುರೆಯನ್ನು ತೋರಿಸಿ, 'ಅದು ನನ್ನ 'ರಾಕಿ', ಇಲ್ಲಿಂದಲೇ ಕರೆದರೂ ಅದಕ್ಕೆ ಗೊತ್ತಾಗತ್ತೆ' ಎಂದು ಜೋರಾಗಿ ಕೂಗು ಹಾಕಿದ. ದೀಪಕನ ಧ್ವನಿ ಕೇಳಿದ್ದೇ ಅತ್ತಲಿಂದ ರಾಕಿ ಕೆನೆಯಲು ಶುರುಮಾಡಿತು. ತನ್ನ ಒಲವಿನ ಕುದುರೆ ಮರಿ ಕೆನೆದಾಗ ಉಬ್ಬಿಹೋದ ದೀಪಕ್ 'ಮತ್ತೆ ಕೆನೆಯುತ್ತೆ ನೋಡಿ' ಎಂದು ಮತ್ತೊಮ್ಮೆ ಶಿಳ್ಳೆ ಹಾಕಿದ. ಅದು ದೂರದಿಂದಲೇ ತೋರಿಸುತ್ತಿದ್ದ ಪ್ರೀತಿಯ ಕಂಪನಕ್ಕೆ ತಡೆಯಲಾಗದೇ ಅದನ್ನೊಮ್ಮೆ ಅಪ್ಪಿಕೊಂಡು ಬರುತ್ತೇನೆಂದು ಹೊರಟ.

ಕುದುರೆಯಿಂದ ಇಳಿದ ಮೇಲೆ, ಊರ ಬುಡದಿಂದ ಸ್ವಲ್ಪ ದೂರದವರೆಗೂ ನಡೆದುಕೊಂಡೇ ಹೋಗಬೇಕು. ಅಲ್ಲೇ ಕುಫ್ರಿಯಲ್ಲಿ ಆಡಬಹುದಾದ ಸಾಹಸಮಯ ಆಟಗಳಿಗೆ ಟಿಕೆಟ್ ಖರೀದಿಸಿ, ಮತ್ತೆ ಜೀಪ್‌ನಲ್ಲಿ ಹಿಮ ಹೊದ್ದ ಜಾಗವನ್ನು ತಲುಪಿದೆವು.



ಕುಫ್ರಿಯಲ್ಲಿ ಸಾಹಸದಾಟ



ಕುಫ್ರಿಯ ನೆತ್ತಿಮೇಲಿಂದ ಕಾಣುವ ವಿಹಂಗಮ ನೋಟ